Spl.C. No.142/2022
PW.01

**ದೋ.ಸಾ. : 01    ಪ್ರಾ.ಸಾ. : 01**

**ದಿನಾಂಕಃ 27-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಆರೋಪಿ ಪರ ಎಲ್.ಎ.ಡಿ.ಸಿ ವಕೀಲರಿಂದ**

13. ನನಗೆ ಕನ್ನಡ ಓದಲು-ಬರೆಯಲು ಬರುವುದಿಲ್ಲ. ದೂರಿನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ದಾಂಡೇಲಿ ಆಸ್ಪತ್ರೆಯಿಂದ ಪೊಲೀಸ್ ಠಾಣೆ ಸುಮಾರು 3 ರಿಂದ 5 ಕಿ.ಮೀ ದೂರದಲ್ಲಿರುತ್ತದೆ. ದೂರನ್ನು ನೀಡಲು ಪೊಲೀಸ್ ಠಾಣೆಗೆ ನಾನು, ಚಾಸಾ-7 ರವರು ಹೋಗಿರುತ್ತೇವೆ. ನಾವು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟ ನಂತರ ಪೊಲೀಸರು ಆಸ್ಪತ್ರೆಗೆ ಬಂದಿರುತ್ತಾರೆ. ಆಸ್ಪತ್ರೆಯಲ್ಲಿ ಎಷ್ಟು ಜನರು ಇದ್ದರು ಎಂದರೆ ಸಾಕ್ಷಿಯು ಸುಮಾರು ಜನರು ಇದ್ದರು, ಆದರೆ ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ಶವ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ನಾನು, ಚಾಸಾ-2, 3 ರವರು ಹಾಗೂ ಪೊಲೀಸರು ಇದ್ದೆವು. ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಹೋಂ ಸ್ಟೇನಲ್ಲಿ ಕೆಲಸ ಮಾಡುವವರು ಬಹಳಷ್ಟು ಜನರು ಇರುತ್ತಾರೆ ಎಂದರೆ ಸರಿ. ನನ್ನ ತಾಯಿ ಹೊಂ ಸ್ಟೇನಲ್ಲಿ ಕೆಲಸ ಮಾಡುವವರ ಜೊತೆ ಚೆನ್ನಾಗಿದ್ದರು ಎಂದರೆ ಸರಿ. ನನ್ನ ತಾಯಿ ಎಂದಿಗೂ ನನ್ನ ಬಳಿ ಕೆಲಸ ಮಾಡುವ ಜಾಗದಲ್ಲಿ ನನಗೆ ತೊಂದರೆ ಕೊಡುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ನಾನು ಹೋಂ ಸ್ಟೇಗೆ ಹೋದಾಗಲೂ ಸಹ ನನ್ನ ತಾಯಿ ನನ್ನ ಬಳಿ 1 ನೇ ಆರೋಪಿ ನನಗೆ ತೊಂದರೆ ಕೊಡುತ್ತಾನೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಹೋಂ ಸ್ಟೇಗೆ ಬಹಳಷ್ಟು ಜನರು ಬಂದು ಹೋಗುತ್ತಾರೆ ಎಂದರೆ ಸರಿ.ಹೋಂ ಸ್ಟೇಗೆ ಬಹಳಷ್ಟು ಜನರು ಕಾರಣ ನನ್ನ ತಾಯಿಗೆ ಬಹಳಷ್ಟು ಕೆಲಸ ಇತ್ತು ಎಂದರೆ ಸರಿ. ಹೋಂ ಸ್ಟೇ ನಲ್ಲಿ ಬಹಳಷ್ಟು ಕೆಲಸ ಇದ್ದಾಗ ಅಲ್ಲಿಯೇ ಉಳಿಯುತ್ತಿದ್ದಳು ಎಂದರೆ ಸಾಕ್ಷಿಯು ಎಲ್ಲಾ ದಿನಗಳಲ್ಲಿಯೂ ಅಲ್ಲಿ ಉಳಿಯುತ್ತಿದ್ದಳು ಎಂದು ನುಡಿಯುತ್ತಾರೆ. ಮನೆಯಲ್ಲಿ ನೋಡಿಕೊಳ್ಳಲು ಯಾರು ಇಲ್ಲದ ಕಾರಣ ನನ್ನ ತಾಯಿ ಹೋಂ ಸ್ಟೇ ನಲ್ಲಿ ಉಳಿಯುತ್ತಿದ್ದಳು ಎಂದರೆ ಸರಿಯಲ್ಲ.

14. ನನಗೆ ಹಾಗೂ ನನ್ನ ತಮ್ಮನಿಗೆ ಮದುವೆಯಾಗಿರುತ್ತದೆ. ನಾವಿಬ್ಬರೂ ನಮ್ಮ ತಾಯಿಯೊಂದಿಗೆ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿ ನನ್ನ ತಮ್ಮನೊಂದಿಗೆ

ವಾಸವಾಗಿದ್ದಳು ಎಂದು ನುಡಿಯುತ್ತಾರೆ. ನನ್ನ ತಮ್ಮ ದಾಂಡೇಲಿಯ ಗಾಂವಠಾಣದಲ್ಲಿ ಕೆಲಸ ಮಾಡುತ್ತಾನೆ. ದಾಂಡೇಲಿಯ ಗಾಂವಠಾಣದಿಂದ ಆಶ್ರಯ ಕಾಲೋನಿ 10 ಕಿ.ಮೀ ದೂರದಲ್ಲಿರುತ್ತದೆ. ನನ್ನ ತಾಯಿ ಆಶ್ರಯ ಕಾಲೋನಿಯಲ್ಲಿ ವಾಸವಾಗಿದ್ದಳು. ನಾವು ಸಣ್ಣ ಮಕ್ಕಳು ಇರುವಾಗ ನಮ್ಮ ತಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿಗೆ ಸರಾಯಿ ಕುಡಿಯುವ ಚಟ ಇತ್ತು ಎಂದರೆ ಸರಿಯಲ್ಲ. ಆದ ಕಾರಣ ನನ್ನ ತಂದೆಯವರು ನನ್ನ ತಾಯಿಯನ್ನು ಬಿಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡಿಲ್ಲ ಬದುಕಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

15. ನಮ್ಮ ತಾಯಿಯನ್ನು ನಾವು ಸರಿಯಾಗಿ ನೋಡಿಕೊಳ್ಳುತ್ತಿಲ್ಲದ ಕಾರಣ, ಆಕೆ ತುಂಬಾ ಬೇಜಾರಲ್ಲಿದ್ದಳು ಹಾಗೂ ಈ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡಿದ್ದಳು ಎಂದರೆ ಸರಿಯಲ್ಲ. ನಾನು ನನ್ನ ತಾಯಿಯನ್ನು ಭೇಟಿ ಮಾಡಲು ಹೋಂ ಸ್ಟೇ ಗೆ ಹೋದಾಗ, ಆಕೆಯಿಂದ ಹಣವನ್ನು ತೆಗೆದುಕೊಂಡು ಬರುತ್ತಿದ್ದೆ ಹಾಗೂ ಆಕೆಯನ್ನು ಮನೆಗೆ ಕರೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಸರಾಯಿ ಕುಡಿಯುತ್ತಿದ್ದ ಕಾರಣ, ನನ್ನ ಗಂಡನೂ ಸಹ ಆಕೆಯನ್ನು ಮನೆಗೆ ಸೇರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಂಡಾಗ, ನನ್ನ ಗಂಡ ಆಸ್ಪತ್ರೆಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ, ನನ್ನ ತಾಯಿಯನ್ನು ಮನೆಗೆ ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಗೆ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಆಕೆಗೆ ವಯಸ್ಸಾದ ಕಾರಣ ಆಕೆಗೆ ಕೆಲಸ ಮಾಡಲು ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ನಮ್ಮ ಬಳಿ ಮನೆಗೆ ಕರೆದುಕೊಂಡು ಹೋಗಿ, ನನ್ನ ಕೈಯಿಂದ ಕೆಲಸ ಮಾಡಲು ಆಗುತ್ತಿಲ್ಲ ಎಂದು ಹೇಳಿದ್ದಳು ಎಂದರೆ ಸರಿಯಲ್ಲ. ನಾವುಗಳು ನಮ್ಮ ತಾಯಿಯನ್ನು ಸರಿಯಾಗಿ ನೋಡಿಕೊಳ್ಳದ ಕಾರಣ ಹಾಗೂ ಆಕೆಯನ್ನು ಮನೆಗೆ ಕರೆದುಕೊಂಡು ಬರದ ಕಾರಣ, ಆಕೆಗೆ ಬೇಜಾರಾಗಿ ಮನಸ್ಸಿಗೆ ಹಚ್ಚಿಕೊಂಡು, ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ.

16. ನನ್ನ ತಾಯಿ ಆತ್ಮಹತ್ಯೆ ಮಾಡಿಕೊಂಡಿದ್ದರೂ ಸಹ ಸರಕಾರದಿಂದ ಹಣ ಬರುತ್ತದೆ ಎನ್ನುವ ಕಾರಣದಿಂದ ನಾನು ಮತ್ತು ಚಾಸಾ-7 ರವರ ಸೇರಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಕುತ್ತಿಗೆ ಯಾವುದೇ ಕಪ್ಪು ಗುರುತುಗಳು ಇರಲಿಲ್ಲ ಹಾಗೂ ಕಾಲಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

Spl.C. No.142/2022
PW.01

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ